**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಂಗಾರಪೇಟೆ**

**ಸಿಸಿ ಸಂಖ್ಯೆ: 3/2019**

**ಚಾಸಾಃ 10 ಪ್ರಾಸಾಃ 2**

**ಸಾಕ್ಷಿಯನ್ನು ದಿಃ 04-06-2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ದಿವಾಕರ್ ನಾಯ್ಡು |
| ತಂದೆ ಹೆಸರುಃ | ಕೃಷ್ಣಮೂರ್ತಿ |
| ವಯಸ್ಸುಃ | 63 |
| ವೃತ್ತಿಃ | ನಿವೃತ್ತ ಅಧಿಕಾರಿ |
| ವಾಸ ಸ್ಥಳಃ | ಬೆಂಗಳೂರು |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2017 ರಿಂದ 2023 ಮಾರ್ಚ್ ವರೆಗೆ ಬಂಗಾರಪೇಟೆ ಪೊಲೀಸ್ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಚಾಸಾ-9 ರವರ ಕಡೆಯಿಂದ ಎನ್ ಸಿ ಆರ್ ಪಡೆದುಕೊಂಡು ಅಸಃಜ್ಞೆ ಅಪರಾಧ ಆಗಿರುವ ಕಾರಣದಿಂದ ಮಾನ್ಯ ನ್ಯಾಯಾಲಯದಿಂದ ಸೂಕ್ತ ಆದೇಶ ಪಡೆದುಕೊಂಡಿರುತ್ತೇನೆ. ಸದರಿ ನ್ಯಾಯಾಬಲಯಿದ ಆದೇಶ ಪಡೆದುಕೊಂಡು ದಿಃ 27-07-2018 ರಂದು 270/2018 ಅಂತ ಪ್ರಕರಣ ದಾಖಲಿಸಿ ಮೂಲ ಪ್ರ ವ ವ ವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ದಿಃ 28-07-2018 ರಂದಜ ಚಾಸ-1 ರಮ ತೋರಿಸಿದ ಘಟನ ಸ್ಥಳದ ಪಂಚನಾಮೆಯನ್ನು ಚಾಸಾ-4 ಮತ್ತು 5 ರವರ ಸಮಕ್ಷಮ ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನ 11-35 ರಿಂದ 11-40 ವರಿಗೂ ಜರುಗಿಸಿರುತ್ತೇನೆ. ಅದೇ ದಿನ ಚಾಸಾ-2 ಮತ್ತು 3 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಆರೋಪಿತರು ಮಾನ್ಯ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡಿದ್ದು, ಸದರಿ ಪ್ರತಿಯನ್ನು ಆರೋಪಿತರು ಠಾಣೆಗೆ ಬಂದು ಹಾಜರು ಪಡಿಸಿರುತ್ತಾರೆ.

ದಿಃ 23-08-2018 ರಂದು ಚಾಸಾ-1 ರವರು ಠಾಣೆಗೆ ಹಾಜರಾಗಿ ಒಂದು ನೀಲಗಿರಿ ದೊಣ್ಣೆ ಮತ್ತು ರಾಡನ್ನು ಪಂಚರಾದ ಚಾಸಾ-6 ಮತ್ತು 7 ರವರ ಸಮಕ್ಷಮ ಹಾಜರು ಪಡಿಸಿದ್ದು ಅದನ್ನು ಸದರಿ ಸಾಕ್ಷಿದಾರರರ ಸಮಕ್ಷಮ ಜಪ್ತಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು 05-30 ರಿಂದ 06-15 ವರಿಗೂಜರುಗಿಸಿರುತ್ತೇನೆ. ದಿಃ 22-08-2018 ರಂದು ಚಾಸಾ-1 ರವರ ಗಾಯದ ಪ್ರಮಾಣಪತ್ರ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೂಂಡಿರುತ್ತೇನೆ. ದಿಃ 24-08-2018 ರಂದು ತನಿಖೆ ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಅಂತಿಮ ವರದಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಯು ಪ್ರ ವ ವ ಹಾಗೂ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕೃತ್ಯ ನಡೆದ ಸ್ಥಳದ ಪಂಚನಾಮೆ ಹಾಗೂ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಜಪ್ತಿ ಪಂಚನಾಮೆ ಹಾಗೂ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ನೀಲಗಿರಿ ದೊಣ್ಣೆ ಹಾಗೂ ರಾಡನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ-1 ಮತ್ತು 2 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಪತರು ನೋಡಿ ಗುರುತಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆಸಿಪಿ ವಕೀಲರಿಂದ</u>**

ನನ್ನ ತನಿಖಾ ಅವಧಿಯಲ್ಲಿ ಚಾಸಾ-1 ಮತ್ತು ಆರೋಪಿತರ ಮಧ್ಯ ವೈಷಮ್ಯ ಇರುವುದು ತಿಳಿದು ಬಂದಿತ್ತು. ಚಾಸಾ-1 ರವರು ಕೆಜಿಎಫ್ ನ ವಾಸಿ ಎಂದರೆ ಸರಿ. ಆರೋಪಿತರು ಬಂಗಾರಪೇಟೆಯವರು ಎಂದರೆ ಸರಿ. ಆರೋಪಿ-3 ಹಾಗೂ ಚಾಸಾ-1 ರವರ ಮಧ್ಯ ಹಣದ ವ್ಯವಹಾರ ಇತ್ತು ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ರವರು ಆರೋಪಿ -3 ರವರಿಗೆ ಹಣವನ್ನು ಕೊಡಬೇಕಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆರೋಪಿ-1 ರವರು ವಿದ್ಯಾದಿರ್ಥಿಯಾಗಿದ್ದು ಘಟನೆ

ನಡೆಯುವ ಕಾಲಕ್ಕೆ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಘಟನೆ ನಡೆದ ಕಾಲಕ್ಕೆ ಆರೋಪಿ–2 ರಮರ ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿ–3 ರವರು ಬಾರಿನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿರುವ ಕಾರಣದಿಂದ ಅವರೂ ಕೂಡ ಘಟನ ಕಾಲಕ್ಕೆ ಕ್ಯಾಸಂಬಳ್ಳಿಯಲ್ಲಿದ್ದರು ಎಂದರೆ ಸರಿಯಲ್ಲ. ಹಣದ ಭಾಧ್ಯತೆಯಿಂದ ತಪ್ಪಿಸಿಕೊಳ್ಳಲು ಚಾಸ–1 ರರವರು ಆರೋಪಿತರ ವಿರುದ್ಧ ಸುಳ್ಳು ಅಪಾದನೆ ಮಾಡಿ ಸುಳ್ಳು ದೂರನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಘಟನ ಸ್ಥಳವು ಜನನಿಬಿಡ ಸ್ಥಳವಾಗಿರುತ್ತದೆ ಎಂದರೆ ಸರಿ. ಆರೋಪಿತರಿಗೂ ಹಾಗೂ ಮುದ್ದೆಮಾಲಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಮು.ಮಾ–1 ಮತ್ತು 2 ಎಲ್ಲಾ ಕಡೆಗೂ ಸಿಗುತ್ತದೆ ಎಂದರೆ ಸರಿಯಲ್ಲ. ಆರೋಪಿ–3 ಹಾಗೂ ಚಾಸಾ–1 ರವರ ಮಧ್ಯ ಹಣದ ವ್ಯವಹಾರ ಇದ್ದು ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಅವರ ನಡುವೆ ವೈಷಮ್ಯ ಇದ್ದ ಕಾರಣ ಚಾಸಾ–1 ರವರು ಸುಳ್ಳು ಆಪಾದನೆ ಮಾಡಿರುತ್ತಾರೆ ಎಂದೆರ ಸರಿಯಲ್ಲ. ಸದರಿ ಸಂಗತಿ ನನಗೆ ಗೊತ್ತಿದ್ದರೂ ಕೂಡ ಸುಳ್ಳು ಅಂತಿಮ ವರದಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಸುಕೀತಾ ಎಸ್ ಹದ್ಲಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ